ಉಪಕೇಂದ್ರದ ನಿರ್ಮಾಣದ ಬಗ್ಗೆ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಗಳನ್ನು ಅಧ್ಯಯನ ಮಾಡಲಾಗುತ್ತಿದೆ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಜೂನ್ 1990ರ ಅಂತ್ಯದಲ್ಲಿ ವಿದ್ಯುತ್ ಒದಗಿಸುವುದಕ್ಕಾಗಿ ಕೋರಿ ಬಂದ 1192 ಅರ್ಜಿಗಳು ಬಾಕಿ ಉಳಿದಿದ್ದವು. (ಎಲ್ಲಾ ವಿಧದ ಸ್ಥಾವರಗಳು) ಸೇರಿ.

ಈ) ಈ ವಿಷಯ ಕೆ.ಇ.ಬಿ. ಗಮನಕ್ಕೆ ಬಂದಿರುವುದಿಲ್ಲ.

ಕರ್ನಾಟಕ ರೇಷ್ಮೆಯ ಉದ್ಯಮ ನಿಗಮ (ನಿ) ದಲ್ಲಿ ಕ್ರೂಢೀಕೃತ ರೇಷ್ಮೆ ವಸ್ತ್ರಗಳು

1476 ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ರೇಷ್ಮೆ ರಾಜ್ಯ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಮಾರ್ಚ್ ತಿಂಗಳು 1990ಕ್ಕೆ ಕೊನೆಗೊಂಡಂತೆ ಕ್ರೂಢೀಕೃತ ರೇಷ್ಮೆ ವಸ್ತ್ರಗಳು ದಾಸ್ತಾನಿನ ವಿವರಗಳನ್ನು ನೀಡುವುದು.

ಆ) ಈ ದಾಸ್ತಾನುಗಳ ಮೌಲ್ಯವೆಷ್ಟು?

ಇ) ಈ ಅತೀವ ದಾಸ್ತಾನು ಸಂಗ್ರಹಣಕ್ಕೆ ಕಾರಣಗಳೇನು?

ಈ) ಈ ಸಂಗ್ರಹಣವಾಗಿರುವ ದಾಸ್ತಾನನ್ನು ಸಮಾಪನಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು.):-

ಅ) ನಿಧಾನವಾಗಿ ಮಾರಾಟವಾಗುವ ರೇಷ್ಮೆ ವಸ್ತ್ರಗಳು, ತುಂಡು ಬಟ್ಟೆಗಳು ಮತ್ತು ಇನ್ನಿತರ ವಸ್ತ್ರಗಳ ಕ್ರೂಢೀಕೃತ ದಾಸ್ತಾನು 1 ಲಕ್ಷ ಮೀಟರ್‌ಗಳಾಗಿರುತ್ತದೆ.

ಆ) ಸುಮಾರು ರೂ.87.00 ಲಕ್ಷಗಳಾಗಿರುತ್ತದೆ.

ಇ) ಈ ವಿವಿಧ ವಸ್ತ್ರಗಳಲ್ಲಿ ಮಾರಾಟ ಮಳಿಗೆಗಳು ಹಿಂತಿರುಗಿಸುವ ವಸ್ತ್ರಗಳ ತುಂಡುಗಳು ನಿಧಾನ ಗತಿಯಲ್ಲಿ ಮಾರಾಟವಾಗುವ ಮಾಸಲಾದ ವಸ್ತ್ರಗಳನ್ನೊಳಗೊಂಡಿರುತ್ತದೆ. ಇವಲ್ಲದೆ ಕೆಳದರ್ಜೆ ವಸ್ತ್ರಗಳು ಅಂದರೆ ಗಾಸಿಗೊಂಡಿರುವ, ರೂಢಿಯಲ್ಲಿಲ್ಲದೆ ಇರುವ ವಸ್ತ್ರಗಳನ್ನೊಳಗೊಂಡಿರುತ್ತದೆ.

ಈ) ಕ್ರೂಢೀಕೃತವಾದ ದಾಸ್ತಾನನ್ನು ಸಮಾನಗೊಳಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಆಗಾಗ್ಗೆ ಪ್ರದರ್ಶನ ಹಾಗೂ ಮಾರಾಟ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.

2. ವಸ್ತ್ರಗಳ ತುಂಡುಗಳನ್ನು ಆಗಾಗ್ಗೆ ಹರಾಜಿನ ಮೂಲಕ ಮಾರಾಟ ಮಾಡುವುದು.

3. ಉಡುಪು ತಯಾರಕರ ಮತ್ತು ಒಟ್ಟಿಗೆ ಖರೀದಿಸುವವರ ಮೂಲಕ ಮಾರಾಟವನ್ನು ಮಾಡಲು ಕ್ರಮ ವಹಿಸಲಾಗುತ್ತದೆ.

ಕುದೂರಿಗೆ ಲೆಕ್ಕಪತ್ರ ಘಟಕವನ್ನು ಮಂಜೂರು ಮಾಡುವ ಬಗ್ಗೆ.

1631 (ಎ) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಕೈಗಾರಿಕ ಮತ್ತು ಇಂಧನ, ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುದೂರು ಕೆ.ಇ.ಬಿ. ಕಛೇರಿಯಲ್ಲಿ ಲೆಕ್ಕಪತ್ರ ಶಾಖೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣವೇನು?

ಶ್ರೀ ಎಸ್.ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು):-